ಕೃಷಿಯೇತರ ಉದ್ದೇಶಕ್ಕಾಗಿ ಜಮೀನಿನ ಭೂ-ಪರಿವರ್ತನೆ (ಕಂದಾಯ ಕಾಯ್ದೆ 1964ರ ಕಲಂ (95) ರನ್ವಯ ಅರ್ಜಿ:-

1. ಅರ್ಜಿದಾರರು ಆನ್‌ಲೈನ್ ಪೋರ್ಟಲ್ ಮೂಲಕ ಅರ್ಜಿಯನ್ನು ಸಲ್ಲಿಸಿ, ಭೂಮಿಯನ್ನು ಕೃಷಿಯಿಂದ ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸಲು ವಿನಂತಿಸುತ್ತಾರೆ. ಅರ್ಜಿಯನ್ನು ಪ್ರಾಧಿಕಾರಕ್ಕೆ ರವಾನಿಸಿದ ನಂತರ, ಅನುಮೋದಿತ ಮಾಸ್ಟರ್ ಪ್ಲಾನ್ ಪ್ರಕಾರ ಮತ್ತು ಪ್ರಾಧಿಕಾರದ ವಲಯನಿಯಮಾವಳಿಗಳಿಗೆ ಅನುಗುಣವಾಗಿ ಪ್ರಸ್ತಾವನೆಯನ್ನು ಪರಿಶೀಲನೆ ಮಾಡಿ, ಪ್ರಾಧಿಕಾರದ ತಾಂತ್ರಿಕ ಅಭಿಪ್ರಾಯವನ್ನು ಆನ್ ಲೈನ್ ಪೋರ್ಟಲ್ ಮೂಲಕ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗುತ್ತದೆ.

ಭೂ-ಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ನೀಡಲು ಸಲ್ಲಿಸಬೇಕಾದ ದಾಖಲೆಗಳ ಪಟ್ಟಿ.

1. ಕ್ರಯ ಪತ್ರ, ಸಾಲು ವಿಭಾಗಪತ್ರ,ಇತೀಚಿನ ಇಸಿ, ನಮೂನೆ-15ಮತ್ತು16
2. ಇತ್ತೀಚಿನ ಆರ್‌ಟಿಸಿ(ಪಹಣಿ), ಮ್ಯುಟೇಶನ್ ಪ್ರತಿ, ಸಂಬಂಧಿಸಿದ ಪ್ರಾಧಿಕಾರದಿಂದ ದೃಢೀಕರಿಸಿದ ಖಾತೆ ಪತ್ರ.
3. ಎಲ್ಲಾ ಬದಿಗಳ ಅಳತೆಗಳುಳ್ಳ ನಮೂದಿಸಿದ ಸರ್ವೆಸ್ಕೆಚ್, ಗ್ರಾಮ ನಕ್ಷೆ ಸಂಬಂದಿಸಿದ ಪ್ರಾಧಿಕಾರದಿಂದ ದೃಢೀಕರಿಸಿದ ಆಕಾರ್‌ಬಂದ್.
4. ಪ್ರಶ್ನಿತ ಜಮೀನಿನ ಅಂಚಿನಿಂದ 100.0 ಮೀ ವರೆಗಿನ ವಿವರಗಳನ್ನು ತೋರಿಸುವ ಸ್ಥಳ ನಕ್ಷೆ.
5. ಸಂಪರ್ಕ ರಸ್ತೆಯ ವಿವರಗಳು, ಅಂದರೆ ರಸ್ತೆಯ ವರ್ಗ, ಅಗಲ ಎಲ್ಲಿಂದ ಎಲ್ಲಿಗೆ ಹೋಗುವ ರಸ್ತೆ ಇತ್ಯಾದಿ.
6. ಪ್ರಶ್ನಿತ ಜಮೀನಿನ ಕ್ಷೇತ್ರವು 10.0 ಎಕರೆಗಿಂತ ಮೇಲ್ಪಟ್ಟಲ್ಲಿ ಕರ್ನಾಟಕ ರಾಜ್ಯ ವಾಯು ಮಾಲಿನ್ಯ ನಿಯಂತ್ರಣಾ ಮಂಡಳಿಯ ನಿರಾಕ್ಷೇಪಣಾ ಪತ್ರ

ಸೂಚನೆ:

ಪ್ರಶ್ನಿತ ಜಮೀನು ಕೆಟಿಸಿಪಿ ಕಾಯ್ದೆ, 1961ರ ಪ್ರಕಾರ ರಚನೆಯಾದ ಕುಶಾಲನಗರ ಯೋಜನಾಪ್ರಾಧಿಕಾರದ ಕಾರ್ಯವ್ಯಾಪ್ತಿಯಲ್ಲಿ ಬರದಿದ್ದಾಗ (ಯೋಜನಾ ಬದ್ದ ಬೆಳವಣಿಗೆ/ಅಭಿವೃದ್ದಿಗಳನ್ನು ನಿಯಂತ್ರಿಸಲು ಇರುವಂತಹ ಪ್ರಾಧಿಕಾರದ ಕಾರ್ಯವ್ಯಾಪ್ತಿಯೊಳಗೆ) ಕಂದಾಯ ಇಲಾಖೆಯು ಎಲ್ಲಾ ದಾಖಲೆ ಪರಿಶೀಲಿಸಿ, ಅರ್ಜಿಯನ್ನು ದಾಖಲೆಗಳೊಂದಿಗೆ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಡಿಕೇರಿ ಇವರಿಗೆ ಆನ್ ಲೈನ್ ಮುಖಾಂತರ ಸಲ್ಲಿಸುವುದು.